## ಪದಬಂಧ



ಎಡದಿಂದ ಬಲಕ್ಕೆ:

1.ಕೆಟ್ಟ ಅಭ್ಯಾಸಗಳನ್ನು ಆತ ಕೈ ಬಿಡುವುದು ಸಾಧ್ಯವಿದ್ದಂತಿಲ್ಲ, ಬಿಡಿ 4
3. ಭಾರವನ್ನಿಳಿಸಿದಾಗ ಆಕಾಶ ಮೋಡರಹಿತವಾಗಿತ್ತು 3
4. ಎಲ್ಲೋ ಸತ್ತಿದ್ದಕ್ಕೆ ಇಲ್ಲೇಕೆ ಮೈಲಿಗೆ? 3
6. ಮಳ್ಳನ ಕೈಯಲ್ಲಿರುವುದು ಕದ್ದು ತಂದ ವಸ್ತು 4
7. ವ್ಯಕ್ತಿಯ ಸಾಮರ್ಥ್ಯವನ್ನನುಸರಿಸಿ ಆತನಿಗೆ ಸಂಬಳ 3
9. ಪೂರ್ವಕ್ಕೆ ಹರಡಿರುವ ಹಾಳೆಯಲ್ಲಿ ಬೆಳಕು ಹರಿಯಬಲ್ಲದು 3
11. ಸುಳ್ಳು ನೆಪವನ್ನು ಹೇಳಿ ತಪ್ಪಿಸಿಕೊಂಡವನ ಸ್ಮರಣೆಯೇ? 3
13. ಗಣ್ಯನಾದರೂ ಸರಳವಾಗಿರುವುದು ಆತನ ಒಂದು ಒಳ್ಳೆಯತನ 3
15. ವೇಷ ಮರೆಸಿಯಾದರೂ ಸರಿ, ಮೊದಲು ವಿಶ್ರಾಂತಿಯನ್ನು ಪಡೆ 4
17. ವಾರಿಜನಾಭನ ಪೂಜೆಗೆ ಬಂದವ ಸೂರ್ಯನ ಮಗ, ಕರ್ಣ 3
18. ಕಾರ್ಪಣ್ಯವೇನಿಲ್ಲ; ಆದರೂ ಮಹಾ ಜಿಪುಣ 3
19. ತಲೆಗೆ ತೋಚಿದಂತೆಲ್ಲ ಮಾಡುವುದಲ್ಲ, ಹೇಗೆ ಸೂಕ್ತವೋ ಹಾಗೆ 4

ಮೇಲಿಂದ ಕೆಳಕ್ಕೆ:

1. ಆಭರಣಕ್ಕೆ ಸೂಕ್ತವಲ್ಲ. ಆದರೂ ಹೊಳಪಿನ ಖನಿಜ 3
2. ಸವಲತ್ತುಗಳಿಗಾಗಿ ಕೊಟ್ಟಿದ್ದ ಹಣ ಹಿಂಪಡೆಯುವುದೆಂದರೆ? 3
3. ವರ್ಣನಾತೀತ; ಅದು ಗಾಳಿಯೇ ಇಲ್ಲದ ಪ್ರದೇಶ 3
5. ಕರ್ತವ್ಯಗಳಲ್ಲಿ ತೊಡಗಿಸುವವನೂ ಸೃಷ್ಟಿಕರ್ತನೇ ತಾನೇ? 3
7.ಅಯೋಗ್ಯರಿಗೆ ವಂದನೆ ಮಾಡುವುದೆಂದರೆ ಮನಸ್ಸಿಗೆ ನೋವಾಗುತ್ತದೆ 3
8. ಹೊಸ ಉಡುಪನ್ನ ಧರಿಸಿದೊಡನೆ ಆರಂಭವಾಯಿತು ನಡೆದಾಟ 3
9. ಪ್ರವಾತಕ್ಕಿಳಿಸುವ ಮೊದಲು ಧರಿಸಬೇಕಾದ ಚಪ್ಪಲಿ 3
10. ಕಾಣೆಯಾದವರು ಕದ್ದು ಸಾಗಿಸಿದ್ದು ಒಂದು ಅದ್ಭುತ ಸಾಧನ 3
12. ಕ್ರೂರ ಜನರ ಮೊದಲ ಶಸ್ತ್ರ, ಉಗುರು 3
14. ಗುಡ್ಡೆಯಾದ ಹಣವನ್ನು ತುಂಬಿಡಲು ಭಾರೀ ಮಡಿಕೆ 3
15. ವಜ್ರಾಯುಧವನ್ನು ಹಿಡಿದು ಹೊರಟರೆ ಯಶಸ್ಸು ಖಚಿತ 3
16. ಸಾಕೇತ ರಾಮನ ದರ್ಶನವಾದದ್ದು ಅವರ ಪುಣ್ಯವೇ ಸರಿ 3

### 01–10–2020 ಉತ್ತರಗಳು

ಎಡದಿಂದ ಬಲಕ್ಕೆ:

1. ಸಂತಾಪ 3. ಸತತ 4. ತಟಾಕ 6. ಶಿವಾಲಯ 7. ಕಾಲುಭಾಗ 9. ಲಕ್ಷಾಂತರ 11. ತೆಗಳಿಕೆ 15. ರಹಿತ16. ವಾನರ 17. ರಜಾಯಿ

ಮೇಲಿಂದ ಕೆಳಕ್ಕೆ:

1. ಸಂತಸ 2. ಪತನ 3. ಸಡಿಲ 5. ಕಡಲು6. ಶಿಥಿಲ 8. ಗರಿಕೆ 10. ತತ್ತರ 12. ಗಟಾರ 13. ಅಂತರ 14. ಗವಾಯಿ

ಪ್ರಶ್ನಾಂಕಣ

# ಚಿರತೆ: ಏನು ವಿಶೇಷ?

ಚಿರತೆ. ಅದು ಬೆಕ್ಕುಗಳ (ಫೆಲಿಡೇ) ಕುಟುಂಬದ ಒಂದು ಸದಸ್ಯ. ಬೆಕ್ಕುಗಳ ಒಟ್ಟು ಮೂವತ್ತೇಳು ಪ್ರಭೇದಗಳಲ್ಲಿ, 'ದೊಡ್ಡ ಬೆಕ್ಕು'ಗಳೆಂದೇ ಕರೆಯಲ್ಪಡುವ ಎಂಟು ಪ್ರಭೇದಗಳಲ್ಲಿ (ಹುಲಿ, ಸಿಂಹ, ಜಾಗ್ವಾರ್, ಪ್ಯೂಮಾ, ಚಿರತೆ, ಹಿಮ ಚಿರತೆ, ಚೀತಾ ಮತ್ತು ಕ್ಲೌಡೆಡ್ ಲೆಪರ್ಡ್) ಚಿರತೆಯದು ಗಾತ್ರದಲ್ಲಿ ಐದನೆಯ ಸ್ಥಾನ.

ವಯಸ್ಕ ಚಿರತೆ (ಲೆಪರ್ಡ್) ಗಳದು ಆರು ಅಡಿ ಉದ್ದದ ದಷ್ಟಪುಷ್ಟ ಶರೀರ; ಮೂರು ಅಡಿ ಉದ್ದದ ಬಾಲ; ಐವತ್ತರಿಂದ ಅರವತ್ತು ಕಿಲೋ ತೂಕ; ಗಾಢ ಬಣ್ಣದ ಗುಲಾಬಿ ಆಕಾರದ ಮಚ್ಚೆ ಚಿತ್ತಾರಗಳ ಚರ್ಮ (ಚಿತ್ರಗಳಲ್ಲಿ ಗಮನಿಸಿ). ನಿಶ್ಶಬ್ದವಾಗಿ ಕಾದು ಕುಳಿತು, ಹೊಂಚು ಹಾಕಿ ಬೇಟೆಯಾಡುವ ಕ್ರಮ. ತಾಸಿಗೆ ಅರವತ್ತು ಕಿ.ಮೀ ವೇಗದಲ್ಲಿ ಓಡಬಲ್ಲ, ನೀರಿನಲ್ಲಿ ಸಲೀಸಾಗಿ ಈಜಬಲ್ಲ ಸಾಮರ್ಥ್ಯ. ಚಿರತೆಗಳದು ಬಹುಪಾಲು ವೃಕ್ಷಗಳ ಮೇಲೇ ವಾಸ; ತಾನು ಬೇಟೆಯಾಡಿದ, ತನಗಿಂತ ಹೆಚ್ಚು ತೂಕದ ಬಲಿ ಪ್ರಾಣಿಯನ್ನೂ ಕಚ್ಚಿ ಹಿಡಿದು ಲೀಲಾಜಾಲವಾಗಿ ವೃಕ್ಷಗಳನ್ನೇರಬಲ್ಲ ಅಸಾಮಾನ್ಯ ಶಕ್ತಿ (ಚಿತ್ರ3 ನೋಡಿ)! ಕಿರುಬಗಳಿಂದ ತನ್ನ ಆಹಾರವನ್ನು ರಕ್ಷಿಸಿಕೊಳ್ಳಲು ಈ ವಿಶಿಷ್ಟ ಕ್ರಮ.

ಚಿರತೆಗಳಿಗೆ ಎಂಥ ಪರಿಸರಕ್ಕೂ ಹೊಂದಿಕೊಳ್ಳಬಲ್ಲ ಸಾಮರ್ಥ್ಯ ಇದೆ. ಆದ್ದರಿಂದಲೇ ಎಲ್ಲ ಬಗೆಯ ಅರಣ್ಯಗಳಲ್ಲಿ, ಹುಲ್ಲು ಬಯಲಲ್ಲಿ, ಮರುಭೂಮಿಯಲ್ಲಿ, ಜೌಗು ಪ್ರದೇಶದಲ್ಲಿ... ಇತ್ಯಾದಿ ಎಲ್ಲೆಡೆಗಳಲ್ಲೂ ಅವು ಬಾಳಬಲ್ಲವು. ಸಂತಾನ ಕಾಲವನ್ನು ಹೊರತುಪಡಿಸಿ ಉಳಿದೆಲ್ಲ ಸಮಯಗಳಲ್ಲೂ ಚಿರತೆಗಳದು ಒಂಟಿ ಜೀವನ. ಪ್ರೌಢ ಹೆಣ್ಣುಗಳು ಪ್ರತಿ ಬಾರಿಯೂ ಎರಡು ಮರಿಗಳನ್ನು ಪ್ರಸವಿಸುತ್ತವೆ. ಮರಿಗಳು ತಾಯಿಯೊಡನೆ ಎರಡು ವರ್ಷ ಉಳಿದು (ಚಿತ್ರ 2) ಬದುಕಿನ ಕಲೆಗಳನ್ನೆಲ್ಲ ಕಲಿತು ಸ್ವತಂತ್ರವಾಗುತ್ತವೆ. ಚಿರತೆಗಳ ಸರಾಸರಿ ಆಯುಷ್ಯ ಹದಿನೈದು ವರ್ಷ.




ಸುಮಾರು ಆರು ಲಕ್ಷ ವರ್ಷಗಳಿಂದ ಧರೆಯಲ್ಲಿದ್ದು ಯಶಸ್ವೀ ಬದುಕು ನಡೆಸುತ್ತ ಬಂದಿರುವ ಚಿರತೆಗಳು ಪ್ರಸ್ತುತ ನೆಮ್ಮದಿಯ ಜೀವನವನ್ನು ಕಳೆದುಕೊಂಡಿವೆ. ಇತಿಹಾಸದಲ್ಲಿ ಅವು ಹರಡಿದ್ದರ ಶೇಕಡಾ 25 ರಷ್ಟು ಪ್ರದೇಶದಲ್ಲಷ್ಟೇ ಅವು ಈಗ ಸೀಮಿತ ಸಂಖ್ಯೆಯಲ್ಲಿವೆ. ಆಫ್ರಿಕಾ ಮತ್ತು ಭಾರತ ಉಪಖಂಡ ಅವುಗಳ ಸದ್ಯದ ಪ್ರಧಾನ ನೆಲೆ. ಪ್ರಮುಖವಾಗಿ ಆವಾಸ ನಾಶ ಮತ್ತು ಕಳ್ಳ ಬೇಟೆಗಳಿಂದಾಗಿ ಅವುಗಳ ಸಂಖ್ಯೆ ಕ್ಷಿಪ್ರವಾಗಿ ಕ್ಷೀಣಿಸುತ್ತಿದೆ. ಅವುಗಳ ಒಟ್ಟು 'ಜನಸಂಖ್ಯೆ' ಕೆಲವೇ ಲಕ್ಷಕ್ಕೆ ಇಳಿದಿದೆ. ಚರ್ಮಕ್ಕಾಗಿ ಮತ್ತು ಅವುಗಳ ಮೂಳೆ, ಹಲ್ಲು, ಉಗುರುಗಳಿಗೆ ಔಷಧೀಯ ಗುಣಗಳಿವೆ ಎಂಬ ಮಿಥ್ಯಾ ಕಲ್ಪನೆಗಳಿಗಾಗಿ ಬಲಿಯಾಗುತ್ತ ಚಿರತೆಗಳು ಅಲ್ಪಸಂಖ್ಯಾತವಾಗುತ್ತಿವೆ. 'ಇಂಟರ್ನ್ಯಾಶನಲ್ ಯೂನಿಯನ್ ಫಾರ್ ಕನ್ಸರ್ವೇಶನ್ ಆಫ್ ನೇಚರ್ (IUCN)'ನ ಅಳಿವ ಅಪಾಯದಲ್ಲಿರುವ ಪ್ರಾಣಿಗಳ 'ಕೆಂಪು ಪಟ್ಟಿ'ಗೆ ಚಿರತೆಗಳು ಸೇರಿದ್ದಾಗಿದೆ!

■ ಎನ್. ವಾಸುದೇವ್